ದಿನಾಂಕ 15-12-2018 ರ ಶನಿವಾರ ಬೆಳಿಗ್ಗೆ 11-00 ಗಂಟೆಗೆ ಸೆಸ್ಕ್, ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು / ನೌಕರರು**
**ಶ್ರೀಮತಿ/ಶ್ರೀಯುತ :**

| | | |
|---|---|---|
| 1. | ಶ್ರೀನಿವಾಸ ಮೂರ್ತಿ | : ಅಇಂ(ವಿ),ಮಂಡ್ಯ ವೃತ್ತ. |
| 2. | ಸೋಮರಾಜು | : ಕಾನಿಇಂ(ವಿ), ಪಾಂಡವಪುರ ವಿಭಾಗ. |
| 3. | ಎಂ.ಪ್ರಕಾಶ್ | : ಲೆಕ್ಕಾಧಿಕಾರಿ. ಪಾಂಡವಪುರ ವಿಭಾಗ. |
| 4. | ವಿ. ಪುಟ್ಟಸ್ವಾಮಿ | : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ. |
| 5. | ರೂಪಿಣಿ.ಎಂ.ಎನ್ | : ಸಇಂ(ತಾಂ), ಪಾಂಡವಪುರ ಉಪವಿಭಾಗ. |
| 6. | ಹೆಚ್.ಇ. ಮಹದೇವ | : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ. |
| 7. | ಪಾಂಡುರಂಗ.ಹೆಚ್.ಸಿ | : ಸಇಂ(ವಿ), ಟಿ.ಎಸ್. ಛತ್ರ ಶಾಖೆ. |
| 8. | ಸತೀಶ್ | : ಸಇಂ(ವಿ), ಮೇಲುಕೋಟೆ ಶಾಖೆ. |
| 9. | ಬಿ.ಮೂರ್ತಿ | : ಪ್ರ.ಕಿಇಂ(ವಿ), ಚಿನಕುರಳಿ ಶಾಖೆ. |
| 10. | ಕೃಷ್ಣಮೂರ್ತಿ | : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ. |
| 11. | ಬಿ. ನಂದೀಶ್ | : ಕಿಇಂ(ವಿ), ಬನ್ನಂಗಾಡಿ ಶಾಖೆ. |
| 12. | ಎಂ.ಬಿ ಚೆಲುವರಾಜು | : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ. |
| 13. | ಹೆಚ್.ಪಿ ಮಹೇಶ್ | : ಪ್ರ.ಹಿ.ಸ, ಪಾಂಡವಪುರ ಉಪವಿಭಾಗ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

1. **ಶ್ರೀ ರಾಜಶೇಖರ, ಅಮೃತಿಗ್ರಾಮ, ಮೊಬೈಲ್ ನಂ. 9663142637**

**ದೂರು:** ಚಿಕ್ಕಯಾರಹಳ್ಳಿಯಲ್ಲಿ UNIP ಕೆಲಸವು ಸುಮಾರು.1 ವರ್ಷದಿಂದ ಆಗಿರುವುದಿಲ್ಲ, ನಾನು ಹಲವಾರು ಬಾರಿ ತಮ್ಮ ಕಛೇರಿಗೆ ಬಂದು ವಿಚಾರಿಸಲಾಗಿ, ಈಗ ಕಂಬನೆಟ್ಟಿರುತ್ತಾರೆ, ಇನ್ನೆಷ್ಟು ದಿನಗಳಲ್ಲಿ ಕಾಮಗಾರಿ ಮುಗಿಸುತ್ತೀರೆಂದು ಆಗ್ರಹಿಸಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ, ಈ ತಿಂಗಳ 30 ರೊಳಗೆ ಕಾಮಗಾರಿ ಪೂರೈಸಿ, ವರದಿಮಾಡುವುದರ ಜೊತೆಗೆ ಸಂಬಂಧಿಸಿದ ಗುತ್ತಿಗೆ ಏಜೆನ್ಸಿ ರವರಿಗೆ ದಂಡ ವಿಧಿಸಿರೆಂದು ಸೂಚಿಸಿದರು.

2. **ಶ್ರೀ ದೇವರಾಜು, ಡಿಂಕಾಶೆಟ್ಟಹಳ್ಳಿ ಗ್ರಾಮ, ಮೊಬೈಲ್ ನಂ. 9945916039.**

**ದೂರು:** ಹೊಸಸಾಯಪ್ಪನಹಳ್ಳಿ ಶ್ರೀ ಅರುಣ್‌ರವರಿಗೆ ಸಂಬಂಧಿಸಿದ ಇಲಾತಿ ಹಸುವು ವಿದ್ಯುತ್ ಅಪಘಾತದಿಂದ ಸಾವನ್ನಪ್ಪಿ ಆರುತಿಂಗಳಾದರೂ ಇನ್ನೂ ಇಲಾಖೆಯಿಂದ ಪರಿಹಾರ ನೀಡಿರುವುದಿಲ್ಲ ಮತ್ತು ಬನ್ನಂಗಾಡಿ ವ್ಯಾಪ್ತಿಯಲ್ಲಿ ವಿದ್ಯುತ್ ಮಾರ್ಗಗಳು ಜೋತಾಡುತ್ತಿರುತ್ತವೆ, ಪವರ್ ಮ್ಯಾನ್‌ಗಳು ಕ್ಯಾಂಪ್ ನಲ್ಲಿದ್ದು ಸರಿಯಾಗಿ ಕೆಲಸ ನಿರ್ವಹಿಸಲು ತಿಳಿಸಿರೆಂದು ಮನವಿಮಾಡಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಬನ್ನಂಗಾಡಿ ಶಾಖಾಧಿಕಾರಿಯವರಿಗೆ ಸೂಚಿಸಿ, ಅಪಾಯವಿರುವ ಸ್ಥಳಗಳನ್ನು ಪರಿಶೀಲಿಸಿ, ಮಧ್ಯಂತರ ಕಂಬ ಹಾಕಿಸಲು ಕ್ರಮಕೈಗೊಳ್ಳುವಂತೆಯೂ ಮತ್ತು ಪವರ್ ಮ್ಯಾನ್‌ಗಳನ್ನು ಕ್ಯಾಂಪ್‌ಗಳಿಗೆ ನಿಯೋಜಿಸಿ, ಅವರು ಆ ವ್ಯಾಪ್ತಿಯಲ್ಲಿನ ದೂರುಗಳನ್ನು ಗ್ರಾಹಕರೊಂದಿಗೆ ಸ್ಪಂದಿಸಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು ಮತ್ತು ಹೊಸಸಾಯಪ್ಪನಹಳ್ಳಿ ಅರುಣ್ ರವರ ಇಲಾತಿ ಹಸುವಿನ ಪರಿಹಾರಕ್ಕಾಗಿ ಅಗತ್ಯ ದಾಖಲೆಗಳೊಡನೆ ನಮ್ಮ ಕಛೇರಿಗೆ ಬಂದು ಸಂಪರ್ಕಿಸಿ, ತುರ್ತಾಗಿ ಪರಿಹಾರದ ಮೊತ್ತವನ್ನು ಕೊಡಿಸಲಾಗುವುದೆಂದು ತಿಳಿಸಿದರು.

**3. ಶ್ರೀ ರಮೇಶ್, ಚಿನಕುರಳಿ ಗ್ರಾಮ ಮೊಬೈಲ್ ನಂ. 9611550589.**

**ದೂರು:** ಪಟ್ಟಣದ ವ್ಯಾಪ್ತಿಯಲ್ಲಿ ನಡೆಯುತ್ತಿರುವ IPDS ಕಾಮಗಾರಿಯ ಗುಣಮಟ್ಟ ಸರಿಯಿರುವುದಿಲ್ಲ ಪರೀಕ್ಷಿಸಿರಿ, ಹಾಗೂ ಗುತ್ತಿಗೆದಾರರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ, ನಮ್ಮ ಮನೆಯ UG ಕೇಬಲನ್ನು ತುಂಡರಿಸಿದ ಮೇಲೆಸರಿಯಾಗಿ ಜಾಯಿಂಟ್ ಮಾಡಿರುವುಲ್ಲ, ಅಲ್ಲದೇ ನಿಮ್ಮ ಇಲಾಖೆಯಿಂದ ಕಂಬ ನೆಡುವಾಗ ಮರಗಳನ್ನು ಕಟ್ ಮಾಡುತ್ತೀರಿ, ಇದರಿಂದ ಪರಿಸರ ನಾಶವಾಗುವುದಿಲ್ಲವೇ? ಮುಂದಾಲೋಚನೆಯಿಂದ ನಿಮ್ಮ ಇಲಾಖೆಯವರು, ಅರಣ್ಯ ಇಲಾಖೆಯವರು ಮತ್ತು ರಸ್ತೆ ಪ್ರಾದಿಕಾರಿಯವರು ಸೇರಿ ಸೂಕ್ತ ರೀತಿಯಲ್ಲಿ ಚರ್ಚಿಸಿಕೊಂಡು ಕೆಲಸ ನಿರ್ವಹಿಸಿದರೆ, ದೇಶವು ಸುಧಾರಣೆಯಾಗುತ್ತದೆಂದು ತಿಳಿಸಿದರಲ್ಲದೆ ಪಟ್ಟಣ ವ್ಯಾಪ್ತಿಯಲ್ಲಿ ಜನಸಂಪರ್ಕ ಸಭೆ ನಡೆಸುವ ಬದಲು ಹೋಬಳಿ ಮಟ್ಟದಲ್ಲಿ ಸಭೆ ನಡೆಸಿರಿ, ನಿಮ್ಮ ಇಲಾಖೆಯ ಸೇವೆಯು ಗ್ರಾಹಕರಿಗೆ ಮತ್ತು ರೈತರಿಗೆ ತುಂಬಾ ಅವಶ್ಯಕವಾಗಿ ಬೇಕಾಗಿರುವುದರಿಂದ ಹೆಚ್ಚಿನ ಉಪಯೋಗವಾಗುವುದೆಂದು ಸಲಹೆ ನೀಡಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು IPDS ಕಾಮಗಾರಿಯನ್ನು ಆಗಿಂದಾಗ್ಗೆ ಪರಿಶೀಲಿಸುತ್ತೇವೆ, ಅಲ್ಲದೇ ಇದಕ್ಕಾಗಿಯೇ ತಾಲ್ಲೂಕಿಗೊಬ್ಬರಂತೆ ಕೇಂದ್ರ ಸರ್ಕಾರವು ಗ್ರಾಮವಿದ್ಯುತ್ ಅಭಿಯಂತರರನ್ನು Third party inspection ಯೆಂದು ನೇಮಿಸಿರುತ್ತಾರೆ, ಅವರು ಕಾಮಗಾರಿಯು ವ್ಯತ್ಯಯ ಅಥವಾ ಕಳಪೆಮಟ್ಟದಲ್ಲಿದ್ದರೆ ವರದಿ ನೀಡುತ್ತಾರೆಂದು ತಿಳಿಸುವುದರ ಜೊತೆಗೆ ಸದರಿಯವರು ನೀಡಿದ ಸಲಹೆಯಂತೆ ಹೋಬಳಿ ಮಟ್ಟದಲ್ಲಿ ಜನಸಂಪರ್ಕ ಸಭೆ ನಡೆಸುವುದಾಗಿ ದಿನಾಂಕ ಗೊತ್ತುಪಡಿಸಿದರು, ಅಲ್ಲದೇ ಪರಿಸರ ನಾಶವಾಗದಹಾಗೆ ಸಂಬಂಧಪಟ್ಟ ಇಲಾಖೆಯವರೆಲ್ಲರೂ ಸೇರಿ ಚರ್ಚಿಸಿ ಕೆಲಸ ನಿರ್ವಹಿಸುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

**4. ಶ್ರೀ ಎಲ್.ಸಿ ಪುಟ್ಟೇಗೌಡ, ಲಕ್ಷ್ಮೀಸಾಗರ ಗ್ರಾಮ, ಮೊಬೈಲ್ ನಂ. 9449087877.**

**ದೂರು:** ನಾನು ಈ ಹಿಂದೆ ಸ್ವಂತ ಕಾಮಗಾರಿ ಯೋಜನೆಯಡಿಯಲ್ಲಿ, ಕಂಬ ಸ್ಥಳಾಂತರಿಸಲು ಮನವಿ ಮಾಡಿದ್ದು, ಆದರೆ ಇನ್ನೂ ಕೆಲಸವಾಗಿದಿರುವುದಿಲ್ಲವೆಂದು ಆಗ್ರಹಿಸಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಈ ಸಂಬಧ ವಿಚಾರಿಸಿದ್ದಕ್ಕೆ ಪಾಂಡವಪುರ ಉಪ–ವಿಭಾಗಾಧಿಕಾರಿಯವರು ಸದರಿ ಕೆಲಸವು ಸ್ವಯಂ ನಿರ್ವಹಣಾ ಕಾಮಗಾರಿ ಯೋಜನೆಯಡಿಯಲ್ಲಿ ಅನುಮೋದಿಸಿಕೊಡಲಾಗಿದ್ದು, ಅರ್ಜಿದಾರರು ಗುತ್ತಿಗೆದಾರರ ಮೂಲಕ ಕಾಮಗಾರಿ ಪೂರೈಸಿಕೊಳ್ಳಲು ಸೂಚಿಸಲಾಗಿದ್ದು, ಇದೇ ಗ್ರಾಹಕರು ನೀವೇ ಯಾರಾದರೂ ಗುತ್ತಿಗೆದಾರರನ್ನು ಗೊತ್ತು ಪಡಿಸಿರೆಂದು ಕೋರಿದ್ದಕ್ಕೆ, ಒಬ್ಬ ಗುತ್ತಿಗೆದಾರರನ್ನು ಪರಿಚಯಿಸಿಕೊಟ್ಟು. ಕೆಲಸ ನಿರ್ವಹಿಸಲು ತಿಳಿಸಿ, ಅದರಂತೆ ಗುತ್ತಿಗೆದಾರರು ಒಂದು ಕಂಬವನ್ನು ಸ್ಥಳಾಂತರಮಾಡಿ, ಅರ್ಜಿದಾರರು ಸಹಕರಿಸಿಲ್ಲವೆಂದು ಇನ್ನೊಂದು ಕಂಬವನ್ನು ಹಾಗೆಯೇ ಬಿಟ್ಟುಬಂದಿರುತ್ತಾರೆ. ಸಭೆಯಲ್ಲೇ ಗುತ್ತಿಗೆದಾರರನ್ನು ಕರೆದು ವಿಚಾರಿಸಲಾಗಿ, ಇದೇ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ, ಅಲ್ಲದೇ ಅರ್ಜಿದಾರರು ಹಿಂಬರಹ ನೀಡಲು ಕೋರಿದ್ದಕ್ಕೆ, ಹಿಂಬರಹ ನೀಡಲಾಗಿರುತ್ತದೆ.

5. **ಶ್ರೀ ಸಿ .ಪುಟ್ಟೇಗೌಡ, ಕೆ.ಹೊಸೂರು ಗ್ರಾಮ,**

**ದೂರು:** ಲಕ್ಷ್ಮೀಸಾಗರದಲ್ಲಿ ನಮ್ಮ ಐ.ಪಿ ಸ್ಥಾವರಕ್ಕೆ ಅಳವಡಿಸಿರುವ 25 KVA TC ವಿಫಲವಾಗಿರುವುದನ್ನು ಬದಲಿಸುವಂತೆ ಕೋರಿದರು.

**ಕ್ರಮ:** ಅಂದೇ TC ಬದಲಿಸಿಕೊಡಲಾಯಿತು.

6. **ಶ್ರೀ ರವೀಂದ್ರ ಎ.ಎನ್, ಅಮೃತಿ ಗ್ರಾಮ, ಮೊಬೈಲ್ ನಂ. 9738887099.**

**ದೂರು:** ಮೇಲುಕೋಟೆ ವ್ಯಾಪ್ತಿಯಲ್ಲಿನ ವೀರಭದ್ರೇಶ್ವರ ದೇವಸ್ಥಾನಕ್ಕೆ ಒಂದು ವರ್ಷದಿಂದ ವಿದ್ಯುತ್ ಸಂಪರ್ಕ ಕಲ್ಪಿಸಲಾಗಲಿಲ್ಲವೆಂದು ಆಗ್ರಹಿಸಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಮೇಲುಕೋಟೆ ಶಾಖಾಧಿಕಾರಿಯವರನ್ನು ವಿಚಾರಿಸಲಾಗಿ ಗುತ್ತಿಗೆದಾರರು ಕಂಬವನ್ನು ನೆಟ್ಟಿದ್ದು, 2ACSR ವೈರ್ ಇಲ್ಲವೆಂದು ಕಾಮಗಾರಿ ನಿಲ್ಲಿಸಿರುತ್ತಾರೆಂದು ತಿಳಿಸಿದ್ದಕ್ಕೆ, ಉಗ್ರಾಣದಿಂದ ವೈರನ್ನು ಪಡೆದು ಶೀಘ್ರವಾಗಿ ಕಾಮಗಾರಿ ಪೂರೈಸಿ, ವರದಿಮಾಡಿರೆಂದು ತಿಳಿಸಿದರು.

7. **ಶ್ರೀ ಜಯರಾಮು, ಚಂದ್ರೆ ಗ್ರಾಮ, ಮೊಬೈಲ್ ನಂ. 9008620611.**

**ದೂರು:** ನಮ್ಮ ಗ್ರಾಮದಲ್ಲಿರುವ ಒಂದು 63 KVA TC ಯಿಂದ ಊರಿಗೆ ವೋಲ್ಟೇಜ್ ಸಾಕಾಗುತ್ತಿಲ್ಲ, ತಂತಿಗಳು ಹಳೆಯದಾಗಿವೆ ಮತ್ತು ಕಂಬಗಳು 70-80 ಮೀಟರ್ ಅಂತರದಲ್ಲಿದ್ದು, ತಂತಿಗಳು ಜೋತಾಡುತ್ತವೆ, ಈ ಸಮಸ್ಯೆಗಳನ್ನು ಸರಿಪಡಿಸಿಕೊಡಿರೆಂದು ಮನವಿಮಾಡಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಊರಿಗೆ ಇನ್ನೊಂದು 63 KVA TC ಹಾಕುವುದರ ಜೊತೆಗೆ, ಹಳೆಯ ತಂತಿಗಳನ್ನು ಬದಲಾಯಿಸಿ ಮಧ್ಯಂತರ ಕಂಬಗಳನ್ನು ಹಾಕಿರೆಂದು ಶಾಖಾಧಿಕಾರಿ/ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.

8. **ಶ್ರೀ ಹಾಳೇಗೌಡ, ಮಹದೇಶ್ವರಪುರಗ್ರಾಮ, ಮೊಬೈಲ್ ನಂ.ಇಲ್ಲ.**

**ದೂರು:** ರೈತರ ಐ.ಪಿ ಸೆಟ್ ಗಳಿಗೆ ಅಳವಡಿಸಿರುವ TC ಗಳು ವಿಫಲವಾದರೆ ವಿಳಂಬಮಾಡದೇ ತಕ್ಷಣವೇ ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ಲೈನ್‌ಮ್ಯಾನ್‌ಗಳಿಗೆ ಮತ್ತು ಶಾಖಾಧಿಕಾರಿಯವರಿಗೆ ಸೂಚಿಸಿರೆಂದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಲೈನ್‌ಮ್ಯಾನ್‌ಗಳು ಮತ್ತು ಶಾಖಾಧಿಕಾರಿಗಳು ರೈತರ TC ಗಳು ವಿಫಲವಾದ ಕೂಡಲೇ, ಪರಿಶೀಲಿಸಿ ತಕ್ಷಣವೇ ಬದಲಾಯಿಸುವಂತೆ ಸೂಚಿಸಿದರಲ್ಲದೇ, ಇಷ್ಟರಲ್ಲೇ ಪಾಂಡವಪುರ ಪಟ್ಟಣದಲ್ಲಿ ಪರಿವರ್ತಕ ರಿಪೇರಿ ಸೆಂಟರ್' ಅನ್ನು ತೆರೆಯಲಾಗುತ್ತಿದ್ದು, ಮುದಿನ ದಿನಗಳಲ್ಲಿ ಪರಿವರ್ತಕ ಬದಲಾವಣೆಗೆ ತೊಡಕಾಗದಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ವಿವರಿಸಿದರು.

9. **ಶ್ರೀ ನರಸಿಂಹೇಗೌಡ, ಇಂಗಲಗುಪ್ಪೆಗ್ರಾಮ. ಮೊಬೈಲ್ ನಂ. 8197255620.**

**ದೂರು:** ನಮ್ಮ ಐ.ಪಿ ವ್ಯಾಪ್ತಿಯಲ್ಲಿನ 2 TC ಗಳಿಗೆ ಸೇರಿ ಒಂದೇ DOLO ಇದೆ, ಒಂದು TC ಯ ತೊಂದರೆಯಾದರೆ, ಮತ್ತೊಬ್ಬರಿಗೆ ತೊಂದರೆಯಾಗುತ್ತದೆ, ಇನ್ನೊಂದು DOLO ಅಳವಡಿಸಿ, ತೊಂದರೆಯನ್ನು ಸರಿಪಡಿಸಿಕೊಡಿರೆಂದು ಮನವಿಮಾಡಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಶಾಖಾಧಿಕಾರಿಯವರಿಗೆ ಕೂಡಲೇ ಪ್ರತ್ಯೇಕವಾಗಿ DOLO ಅಳವಡಿಸಿ, ತೊಂದರೆಯನ್ನು ಸರಿಪಡಿಸಿರೆಂದು ಸೂಚಿಸಿದರು.

**10. ಶ್ರೀ ನರಸಿಂಹೇಗೌಡ, ಇಂಗಲಗುಪ್ಪೆಗ್ರಾಮ. ಮೊಬೈಲ್ ನಂ. 8197255620.**

ದೂರು: ನನ್ನ ಸರ್ವೆ ನಂಬರ್ 11/9 ರ ಹೊಲದ ಮೇಲೆ 11 ಕೆ.ವಿ ವಿದ್ಯುತ್ ಮಾರ್ಗವು ಹಾದು ಹೋಗಿದ್ದು, 65 ಮೀಟರ್ ಅಂತರವಿರುತ್ತದೆ, ತಂತಿಗಳು ಜೋತಾಡುತ್ತಿರುತ್ತವೆ, ಇದನ್ನು ಸರಿಪಡಿಸಿರೆಂದು ಮನವಿಮಾಡಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಶಾಖಾಧಿಕಾರಿಯವರಿಗೆ ಸೂಚಿಸಿ ಎರಡು ಮಧ್ಯಂತರ ಕಂಬ ಹಾಕಲು ಸೂಚಿಸಿದರು.

**:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/2649-60 ದಿನಾಂಕ: 22.12.2018

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.